## ಅಡುಗೆ ಭಟ್ಟ ಆಗ್ತೀನಿ...

ನನ್ನ ಭಾವನ ಮೊಮ್ಮಗನಿಗೆ ಸಿಹಿ ತಿಂಡಿಗಳೆಂದರೆ ತುಂಬಾ ಪ್ರೀತಿ. ಆದರೆ, ಸಕ್ಕರೆ ದೇಹಕ್ಕೆ ಒಳ್ಳೆಯದಲ್ಲ ಎಂಬ ಕಾರಣಕ್ಕೆ ಮನೆಯವರು ಹೆಚ್ಚು ಸಿಹಿ ತಿನ್ನಲು ಬಿಡುತ್ತಿರಲಿಲ್ಲ. ಒಂದು ದಿನ ಮನೆಗೆ ಬಂದ ಸಂಬಂಧಿಯೊಬ್ಬರು, 'ಪುಟ್ಟಾ ನೀನು ದೊಡ್ಡವನಾದ ಮೇಲೆ ಏನಾಗ್ತೀಯಾ?' ಎಂದು ಕೇಳಿದರು.

ನಾನು ಎಂಜಿನಿಯರ್ ಆಗ್ತೀನಿ, ಡಾಕ್ಟರ್ ಆಗ್ತೀನಿ ಎಂದು ಹುಡುಗ ಹೇಳ್ತಾನೆ ಎಂದು ಮನೆಯವರು ಮುಗುಳ್ನಗುತ್ತಾ ಕುಳಿತಿದ್ದರೆ ಅವನು ಥಟ್ಟನೆ, 'ನಾನು ದೊಡ್ಡೋನಾದ್ಮೇಲೆ ಪದ್ದಣ್ಣನ ಹಾಗೆ ಅಡುಗೆ ಭಟ್ಟ ಆಗ್ತೇನೆ' ಎಂದ. 'ಯಾಕೋ ಅಪ್ಪನ ಹಾಗೆ ಡಾಕ್ಟರ್ ಆಗೋದಿಲ್ವಾ?' ಎಂದು ಕೇಳಿದರೆ, 'ಅಪ್ಪ ಸಿಹಿ ತಿನ್ಬಾರ್ದು ಅಂತಾರೆ. ಆದರೆ ಅಡುಗೆ ಭಟ್ಟ



ಆದ್ರೆ ಹೋಳಿಗೆ, ಲಾಡು ಎಲ್ಲ ಬೇಕಾದಷ್ಟು ತಿನ್ನಬಹುದಲ್ಲ, ಅದಕ್ಕೆ' ಎಂದು ಹೇಳಿಬಿಟ್ಟ!.

**ಪ. ರಾಮಕೃಷ್ಣ ಶಾಸ್ತ್ರಿ**

---

## ಕಾಲ್ ತೋರಿಸ್ತೇನೆ!

ಕಂದಾಯ ಬಡಾವಣೆಯಲ್ಲಿ ಮನೆ ಕಟ್ಟಿ ಕೊಂಡಮೇಲೆ ನೀರಿಗೆ ಅಂಜಿದೊಡೆಂತಯ್ಯಾ ಎನ್ನುವ ಹಾಗೆ, ನೀರಿಗಾಗಿ ಟ್ಯಾಂಕರ್ ಮೊರೆ ಹೋಗಬೇಕು.ಸಂಪ್‌ನಲ್ಲಿ ನೀರು ಇನ್ನೇನು ಖಾಲಿಯಾಗುವುದರಲ್ಲಿ ಇತ್ತು. ನೀರು ಸರಬರಾಜು ಮಾಡುವ ಮಂಜುನಾಥ ಅವರಿಗೆ ಫೋನ್ ಮಾಡಿದೆ, ಅವರು ಮೊಬೈಲ್ ಫೋನ್ ಸ್ವೀಕರಿಸಿದ ಆತನ ನಾಲ್ಕು ವರ್ಷದ ಮಗಳು ಬೃಂದಾಳಿಗೆ, 'ನಿಮ್ ಡ್ಯಾಡಿ ಬಂದ್ಮೇಲೆ ಒಂದು ಲೋಡ್ ನೀರು ಹೊಡೆಯೋಕೆ ಹೇಳು' ಅಂತ ಹೇಳಿದೆ.

'ಸರಿ ಅಂಕಲ್ ಡ್ಯಾಡಿ ಬಂದ್ಮೇಲೆ ಹೇಳ್ತೀನಿ' ಅಂತ ಹೇಳಿದಳು. ನಾನು ಅಷ್ಟಕ್ಕೇ ಸುಮ್ಮನಾಗದೆ 'ಯಾರು ಫೋನ್ ಮಾಡಿದ್ರು ಅಂತ ಹೇಳ್ತೀಯಾ?'



ಅಂತ ಕೇಳಿದೆ. ಅದಕ್ಕೆ ಆಕೆ 'ಫೋನ್ ಕಾಲ್ ತೋರಿಸ್ತೇನೆ' ಅಂತ ಅಂದಳು. ಆಕೆಯ ಬುದ್ಧಿಮತ್ತೆಗೆ ಬೆರಗಾಗುವ ಸರದಿ ನನ್ನದಾಯಿತು.

**ಮಲ್ಲಿಕಾರ್ಜುನ ಸುರಧೇನುಪುರ**